ಕೃಷ್ಣರಾಜಸಾಗರ ಮೈಸೂರು ನಗರಕ್ಕೆ ತುಂಬ ಸಮೀಪ ಇದ್ದರೂ ಅಲ್ಲಿ ಕುಡಿಯುವ ನೀರಿಗೆ ನಾಲ್ಕು ಕೊಡಕ್ಕೆ 2 ರೂಪಾಯಿ, ಐದು ಕೊಡಗಳಿಗೆ ಒಂದು ರೂಪಾಯಿನಂತೆ ಹೀಗೆ ಈ ವಿಧಾನಸಭಾ ಕ್ಷೇತ್ರದಲ್ಲಿ ನೀರಿನ ಮಾರಾಟ ಆಗುತ್ತಿದೆ. ಇದನ್ನೆಲ್ಲ ಅರಿತು ದಯಮಾಡಿ ಮಾನ್ಯ ಮಂತ್ರಿಗಳು, ಈ ನಾಲ್ಕೈದು ಕೋಟಿ ರೂಪಾಯಿ ಯೋಜನೆ ಏನಿದೆ, ಇದನ್ನು ಯಾವಾಗ ಮುಗಿಸುತ್ತೀರಿ ಎಂದು ಹೇಳಬೇಕು. ಇದನ್ನು ಮಾಡಿ ಮುಗಿಸಿದರೆ ಮೈಸೂರು ನಗರದ ನೀರಿನ ಸಮಸ್ಯೆ ಮುಗಿಯುವುದಿಲ್ಲ. ಈಗಾಗಲೇ 28 ಕೋಟಿ ರೂಪಾಯಿಗಳಲ್ಲಿ ಮೇಳಾಪುರದ ಯೋಜನೆ ಬಗ್ಗೆ ತೀರ್ಮಾನವಾಗಿದೆ. ಅದಕ್ಕೆ ತಾವು ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಈ ಕೆಲಸವನ್ನು ಯಾವಾಗ ಮುಗಿಸುತ್ತೀರಿ ಎಂದು ದಯವಿಟ್ಟು ತಿಳಿಸಿ ಉತ್ತರವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು : ಇಷ್ಟು ದೊಡ್ಡ ಉಪಪ್ರಶ್ನೆಯನ್ನು ಹಾಕಿದರೆ ಅವರು ಉತ್ತರ ಹೇಳುವುದು ಹೇಗೆ?

ಶ್ರೀ ವೈಜ್ಯನಾಥ ಪಾಟೀಲ್ : ಈ ವಿಧಾನಸಭಾ ಕ್ಷೇತ್ರ ಅರ್ಬನ್ ಏರಿಯಾದಲ್ಲಿ ಬರುವುದಿಲ್ಲ. ಕೆಲವು ಏರಿಯಾಗಳು ಮಾತ್ರ ಬರುತ್ತವೆ. ಆದರೂ ಕೂಡ ಸರ್ಕಾರದವರು ಈಗ 650 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಸುಮಾರು ಅರ್ಧದಷ್ಟು ಈಗಾಗಲೇ ಖರ್ಚು ಮಾಡಲಾಗಿದೆ. ಇನ್ನು ಉಳಿದ ಹಣ ಕೂಡ ಬೇರೆ ಕಡೆಗೆ ಡೈವರ್ಟ್ ಮಾಡಲಾರದೆ ಸರಿಯಾದ ಸಮಯದಲ್ಲೇ ಖರ್ಚಾಗುತ್ತದೆ. ಈಗ ಬೇರೆ ಭಾಗಗಳಲ್ಲಿ ಅರ್ಬನ್ ಡೆವಲಪ್‌ಮೆಂಟ್ ಏರಿಯಾ ಬಾರದಿದ್ದರೂ ಕೂಡ ಅಲ್ಲಿಯೂ ಸಹ ಅನೇಕ ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಸರ್ಕಾರದ ವತಿಯಿಂದ, ಕೊಳವೆಬಾವಿಗಳನ್ನು ತೆಗಿಸಿ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆ. ಹಾಗೆಯೇ ಟ್ಯಾಂಕರ್‌ಗಳ ಮೂಲಕ ನೀರನ್ನು ಒದಗಿಸುವ ವ್ಯವಸ್ಥೆಯನ್ನೂ ಮಾಡುತ್ತಿದ್ದೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಈ ಯೋಜನೆಗೆ ಇಟ್ಟಂಥ ಹಣ ಬೇರೆ ಯೋಜನೆಗೆ ಉಪಯೋಗವಾಗಿದೆ. ಆದ್ದರಿಂದ ಈ ಯೋಜನೆ ಬೇಗ ಆಗುವುದಿಲ್ಲ. ಆ ಹಣವನ್ನೂ ಬೇರೆ ಕಡೆಗೆ ಉಪಯೋಗ ಮಾಡಿಕೊಂಡರೆ 6.5 ಕೋಟಿಯ ಈ ಯೋಜನೆ ಏನಿತ್ತು ಅದು ಹತ್ತು ಕೋಟಿಯಾಗಬಹುದು. ಯೋಜನೆಗೆ ಇಟ್ಟಂಥ ಹಣವನ್ನು ಉಪಯೋಗಿಸಿ ಸಂಪೂರ್ಣವಾಗಿ ಕೆಲಸ ಪೂರ್ತಿ ಮಾಡಿದ್ದರೆ ಈ ಯೋಜನೆ ಮುಗಿಯುತ್ತಿತ್ತು. ಆದ್ದರಿಂದ ಈ ಯೋಜನೆಯನ್ನು ಯಾವಾಗ ಮುಗಿಸುತ್ತೀರಿ? ಇದು ಇನ್ನು ಎಷ್ಟು ತಿಂಗಳಲ್ಲಿ, ಎಷ್ಟು ವರ್ಷಗಳಲ್ಲಿ ಆಗಬಹುದು?

ಶ್ರೀ ವೈಜ್ಯನಾಥ ಪಾಟೀಲ್ : ಆ ಹಣ ಬೇರೆ ಯೋಜನೆಗಳಿಗೆ ಉಪಯೋಗವಾಗುವುದಿಲ್ಲ. ಅದರದ್ದು ಹಣ ಏನು ಇದೆ, ಅದು ಅದಕ್ಕೇ ಉಪಯೋಗವಾಗುತ್ತದೆ. ಮತ್ತು ಆದಷ್ಟು ತೀವ್ರಗತಿಯಲ್ಲಿ ಆ ಕೆಲಸವನ್ನು ಪೂರ್ಣ ಮಾಡುತ್ತೇವೆ ಎಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ.

**ಮೈಸೂರು ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ**

290 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮೈಸೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತಿದ್ದು ಕಾವೇರಿ ನೀರಿನ ಸರಬರಾಜಿನ ಯೋಜನೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

*ಆ) ಕಾವೇರಿ ಕುಡಿಯುವ ನೀರಿನ ಯೋಜನೆಗೆ ಇದುವರೆಗೆ ವೆಚ್ಚವಾಗಿರುವ ಹಣವೆಷ್ಟು?*

*ಇ) ಈ ಕೆಲಸ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

1) ಮೈಸೂರು ನಗರದಲ್ಲಿ ಹೆಚ್ಚಾಗುತ್ತಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿದೆ.

ಅ) ಮೈಸೂರು ನಗರಕ್ಕೆ ನೀರು ಸರಬರಾಜು ಅಭಿವೃದ್ಧಿ ಯೋಜನೆ ವಿಕ್ರಾಂತ್ ಬಳಿ ಬೂಸ್ಟರ್ ಪಂಪ್ ಅಳವಡಿಕೆ - ರೂ. 93.00 ಲಕ್ಷಗಳು.

ಆ) ನಗರಕ್ಕೆ ನೀರು ಸರಬರಾಜು ಅಭಿವೃದ್ಧಿ ಹಾಗೂ ವಿತರಣಾ ವ್ಯವಸ್ಥೆಯ ನವೀಕರಣ ಯೋಜನೆ - ರೂ. 650.00 ಲಕ್ಷಗಳು.

ಈ) ನಾಲ್ಕನೆಯ ಹಂತದ ನೀರು ಸರಬರಾಜು ಯೋಜನೆ ಮೇಳಾಪುರದಿಂದದ ರೂ. 1981.00 ಲಕ್ಷಗಳು.

ಉ) ಮೇಲಿನ ಯೋಜನೆಗಳಿಗೆ ವೆಚ್ಚವಾಗಿರುವ ಹಣ ಕ್ರಮವಾಗಿ ಈ ಕೆಳಕಂಡಂತೆ ಇರುತ್ತದೆ.

ಅ) ರೂ. 170.65 ಲಕ್ಷಗಳು

ಆ) ರೂ. 144.65 ಲಕ್ಷಗಳು.

ಇ) ರೂ. 358.45 ಲಕ್ಷಗಳು

ಈ) ರೂ. 25.00 ಲಕ್ಷಗಳು

ಇ) a) ವಿಕ್ರಾಂತ್ ಟೈರ್ ಬಳಿ ಬೂಸ್ಟರ್ ಪಂಪ್ ಅಳವಡಿಸುವ ಕೆಲಸ ಮುಗಿಯುವ ಹಂತದಲ್ಲಿದ್ದು ಜುಲೈ 1995ರ ಅಂತ್ಯದಲ್ಲಿ ಮುಗಿಯುವ ನಿರೀಕ್ಷೆ ಇದೆ.

b) ಬೆಳಗೊಳದಿಂದ ಸರಬರಾಜು ಮಾಡುವ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದೆ. ಈ ಕೆಲಸವನ್ನು ಮಾರ್ಚ್ 1996ರ ಅಂತ್ಯದಲ್ಲಿ ಮುಗಿಸಿ ಚಾಲು ಮಾಡಲು ಯೋಜಿಸಿದೆ.

c) ಈ ಯೋಜನೆಯ ಹಲವು ಕೆಲಸಗಳು ಈಗಾಗಲೇ ಮುಗಿದಿದ್ದು ಉಳಿಕೆ ಕೆಲಸಗಳು ಪ್ರಗತಿಯಲ್ಲಿವೆ. ಈ ಯೋಜನೆಯನ್ನು ಡಿಸೆಂಬರ್ 1996ರ ವೇಳೆಗೆ ಪೂರ್ಣಗೊಳಿಸಲಾಗುವುದು.

ಈ) ಈ ಯೋಜನೆಯ ಮೂಲ ಸ್ಥಾವರದ ಕೆಲಸಕ್ಕೆ ಟೆಂಡರನ್ನು ಕರೆಯಲಾಗಿದೆ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮೊದಲನೆಯ ಯೋಜನೆಗೆ 93ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು ಎಂದು ಹೇಳಿದ್ದಾರೆ. ಇದರಲ್ಲಿ 170ಲಕ್ಷ ರೂಪಾಯಿ ಈಗಾಗಲೇ ಖರ್ಚಾಗಿದೆ. ಆದರೆ ಮೂಡಾದಿಂದ ಬರಬೇಕಾದಂಥ ಹಣ 25 ಲಕ್ಷ ರೂಪಾಯಿಗಳು ಬಂದಿಲ್ಲವೆಂದು ಹೇಳಿ ಕೆಲಸ ನಿಂತಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ? ಎರಡನೇ ಯೋಜನೆಯಲ್ಲಿ 170 ಲಕ್ಷ ರೂಪಾಯಿ ತೆಗೆದಿಟ್ಟಿದ್ದರು. ಇದರಲ್ಲಿ 144 ಲಕ್ಷ ರೂಪಾಯಿಗಳು ಈಗಾಗಲೇ ಖರ್ಚಾಗಿದೆ. ಆದರೆ ಕೆಲಸ ಮುಗಿದಿರುವುದು ಕೇವಲ ಅರ್ಧಭಾಗದಷ್ಟು ಮಾತ್ರ. ಇದರ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ? ಇನ್ನು ಮೂರನೇ ಯೋಜನೆಯಲ್ಲಿ ನೀರು ಸರಬರಾಜು ನವೀಕರಣ ಯೋಜನೆ ಪ್ರಗತಿಯಲ್ಲಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಈ 650 ಲಕ್ಷ ರೂಪಾಯಿಗಳ ಒಂದು ಯೋಜನೆಯಲ್ಲಿ ಸರ್ಕಾರದ ವತಿಯಿಂದ ಬಂದಿರುವಂಥಾದ್ದು ಕೇವಲಲ 103 ಲಕ್ಷ ಮಾತ್ರ ಎಂಬುದು ಇಲ್ಲಿಯ ಲೆಕ್ಕದಲ್ಲಿ ತೋರಿಸುತ್ತದೆ. ಈಗಾಗಲೇ ಕೆಲಸ ಕಂಪ್ಲೀಟ್ ಆಗುತ್ತಾ ಇದೆ ಎಂದು

ಉತ್ತರದಲ್ಲಿ ಬಂದಿದೆ. ಇನ್ನು ಕೊನೆಯ ಪ್ರಶ್ನೆ ಏನೆಂದರೆ, ಟೆಂಡರ್ ಕರೆಯಲಾಗಿತ್ತು ಎಂಬ ವಿಚಾರ ಇದೆ. 1990ರಲ್ಲಿ ಮಾನ್ಯ ವೀರೇಂದ್ರ ಪಾಟೀಲರು ಇದಕ್ಕೆ ಅಡಿಗಲ್ಲು ಹಾಕಿದ್ದರು. ಆಗ ಇದರ ಎಸ್ಟಿಮೇಟ್ 19,981 ಲಕ್ಷ ಇತ್ತು. ಆದರೆ 1993-94ರಲ್ಲಿ ಇವೇ ಅಂದಾಜು 2800 ಲಕ್ಷ ಮತ್ತು 1994-95ರಲ್ಲಿ 3003 ಲಕ್ಷ ಆಗಿದೆಯೆಂದು ಮಾಹಿತಿ ಕೊಟ್ಟಿದ್ದಾರೆ. ಆದರೆ ಸರ್ಕಾರದ ಯೋಜನೆಯಲ್ಲಿ ಇನ್ನೂ ಕೇವಲ 1981 ಲಕ್ಷ ಎಂಬ ಮಾಹಿತಿಯನ್ನು ತೋರಿಸುತ್ತಿದ್ದೀರಿ. ಇನ್ನೂ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳತಕ್ಕಂಥ ಕೆಲಸ ಕೂಡ ಮಾಡಿಲ್ಲ. ಟೆಂಡರ್ ಕರೆದು ಎರಡು ವರ್ಷವಾಗಿದೆ. ನಮಗೆ ಕೊಟ್ಟಿರುವ ಉತ್ತರದಲ್ಲಿ ಟೆಂಡರ್ ಕರೆಯಲಾಗಿದೆ ಎಂದು ಇದೆ. ಟೆಂಡರ್ ಕರೆದು ಎರಡು ವರ್ಷಗಳಾದರೂ ಕೂಡ ಕ್ರಮ ತೆಗೆದುಕೊಂಡಿಲ್ಲ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ?

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ 4 ಯೋಜನೆಗಳಿವೆ. ವಿಕ್ರಾಂತ್ ಟೈರ್ ಫ್ಯಾಕ್ಟರಿ ಬಳಿ, ಒಂದು ಬೂಸ್ಟರ್ ಏಳವಡಿಸಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಿದರೆ, ಒಳ್ಳೆಯ ರೀತಿಯಲ್ಲಿ ಆಗುತ್ತದೆ. ಅದರ ಸಲುವಾಗಿ 93 ಲಕ್ಷ ರೂಪಾಯಿಗಳನ್ನು ಈಗಾಗಲೇ ಒದಗಿಸಲಾಗಿದೆ. ಇದು ಜುಲೈ 1995ರೊಳಗಾಗಿ ಪೂರ್ಣವಾಗುತ್ತದೆಂದು ಹೇಳುತ್ತೇನೆ. ಎರಡನೆಯ ಯೋಜನೆ ಬೆಳಗೊಳದಿಂದ ನಗರಕ್ಕೆ ನೀರು ಸರಬರಾಜಿಗಾಗಿ 120 ಲಕ್ಷ ರೂಪಾಯಿ ಎಸ್ಟಿಮೇಟ್ ನಡೆಯುತ್ತಿದೆ, ಅದು ಮಾರ್ಚ್ 1996ರೊಳಗೆ ಪೂರ್ಣವಾಗುತ್ತದೆ. 3ನೇ ಯೋಜನೆ ಅಭಿವೃದ್ಧಿ ಮಂಡಳಿಯಿಂದ ವಿತರಣಾ ವ್ಯವಸ್ಥೆ ನವೀಕರಣ ಮಾಡುವುದು. ಅದರ ಸಲುವಾಗಿ, 650 ಲಕ್ಷ ರೂಪಾಯಿ ಎಸ್ಟಿಮೇಟ್ ಇದೆ. ಇದೂ ಕೂಡ ಡಿಸೆಂಬರ್ 1996ರೊಳಗೆ ಸರ್ಕಾರ ಪೂರ್ಣ ಮಾಡುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಾಲ್ಕನೆಯದು ಮೈಸೂರು ನಗರಕ್ಕೆ 4ನೇ ಹಂತದ ಕುಡಿಯುವ ನೀರಿನ ಯೋಜನೆ ಸಲುವಾಗಿ ಇದೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಇದರಲ್ಲಿ ಸುಮಾರು 19ಕೋಟಿ 81ಲಕ್ಷ ರೂಪಾಯಿಗಳ ಕೆಲಸವಾಗಿರುತ್ತದೆ. ಹಣದ ಅಭಾವದಿಂದ ಇದಕ್ಕೆ ಬಹುಶಃ 4-5 ವರ್ಷಗಳ ಟೈಮ್ ಬೇಕಾಗಬಹುದು.

ಶ್ರೀ ಎ. ರಾಮದಾಸ್ : ಮಾನ್ಯ ಸಭಾಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗಳಿಗೆ ಮಾನ್ಯ ಸಚಿವರು ಹೇಳುವ ಉತ್ತರ ಸಮಂಜಸವಾಗಿಲ್ಲವೆಂದು ನನಗನ್ನಿಸುತ್ತದೆ. ಕಾರಣ, 1981 ಲಕ್ಷ ರೂಪಾಯಿಗಳ ಒಂದು ಯೋಜನೆ ಇತ್ತು, ಅದಕ್ಕೆ 1990-91ರಲ್ಲಿ ಅಡಿಗಲ್ಲು ಹಾಕಲಾಗಿತ್ತು. ಆ ನಂತರ ಸರ್ಕಾರಕ್ಕೆ ಮಾಹಿತಿಯನ್ನೂ ಕೊಡಲಾಗಿದೆ. 1993-94ರಲ್ಲಿ 2,800 ಲಕ್ಷ ಖರ್ಚಾಗುತ್ತದೆಂದು ತಿಳಿಸಿದೆ. 1994-95ರಲ್ಲಿ ಮತ್ತೆ ಒಂದು ಎಸ್ಟಿಮೇಟ್ ಕೊಡಲಾಗಿದೆ. ಇದರಡಿಯಲ್ಲಿ 3,300 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ ಎಂದು ಸರ್ಕಾರಕ್ಕೆ ಕೊಡಲಾಗಿದೆ. ಆದರೂ ಕೂಡ ಸರ್ಕಾರದ ಯೋಜನೆಯಲ್ಲಿ 1981 ಲಕ್ಷ ರೂಪಾಯಿಗಳೇ ಇದೆ ಎನ್ನುವಂಥ ವಿಚಾರ ಇದೆ. ಆ ಭೂಮಿಯೂ ಕೂಡ ಅಕ್ವೈರ್ ಆಗಿಲ್ಲ, ಟೆಂಡರ್ ಕರೆದು ಎರಡು ವರ್ಷವಾಗಿದೆ. ಈ ವಿಷಯದಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ನನಗೆ ಮಾಹಿತಿ ಕೊಡುತ್ತಾ ಇಲ್ಲ.

ಶ್ರೀ ವೈಜನಾಥ ಪಾಟೀಲ್ : ಮಂತ್ರಿಗಳು ಹೋದಾಗ, ಎಷ್ಟೋ ಸಾರಿ, ಬಹಳಷ್ಟು ಅಡಿಗಲ್ಲುಗಳನ್ನು ಇಟ್ಟು ಬಿಡುತ್ತಾರೆ. ಯಾವುದೇ ಯೋಚನೆ ಇರುವುದಿಲ್ಲ, ಏನೂ ಇರುವುದಿಲ್ಲ. ಇದು ಮಾನ್ಯ ವೀರೇಂದ್ರ ಪಾಟೀಲರ ಕಾಲದ್ದು ಆಗಿರಬಹುದು. ಈ ಯೋಜನೆಯನ್ನು 4-5 ವರ್ಷದಲ್ಲಿ ಪೂರ್ಣ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಯಾರು ಯಾರೋ ತಮಗೆ ಇಚ್ಛೆ ಬಂದ ಹಾಗೆ ಈ ಅಡಿಗಲ್ಲುಗಳನ್ನು ಹಾಕಿದ್ದಾರೆಂದು ಹೇಳಿದರು. ಈ ಅಡಿಗಲ್ಲುಗಳನ್ನು

ಎಲ್ಲೆಲ್ಲಿ ಹಾಕಿದ್ದಾರೆ, ಕಾರ್ಯಕ್ರಮ ಆರಂಭವಾಗಿರುವುದು ಎಲ್ಲೆಲ್ಲಿ ಅಥವಾ ಕಾರ್ಯಕ್ರಮ ಆಗದಿದ್ದರೆ, ಸುಮ್ಮನೆ ಅಡಿಗಲ್ಲು ಹಾಕಿದ್ದಾರೆಂದು ಹೇಳೋಣವೇ ನನಗನಿಸುತ್ತದೆ, ಈ ಯೋಜನೆ, ಮೈಸೂರು ಚಾಮರಾಜ ನಗರ ಸೇರಿದಂತೆ ಇ). ಅನೇಕ ಕರ್ನಾಟಕ ರಾಜ್ಯದಲ್ಲಿ ಸುಮಾರು 18 ಯೋಜನೆಗಳಿಗೆ ಆ ಸಂದರ್ಭದಲ್ಲಿ ಹಣವನ್ನು ಒದಗಿಸಿ, ಈ ಯೋಜನೆಗಳನ್ನು ಪ್ರಾರಂಭ ಮಾಡಿದ್ದಾರೆ. ಇದರಲ್ಲಿ ಮಂಡ್ಯ ಜಿಲ್ಲೆಯೂ ಸೇರಿದೆ. ಇದೆಲ್ಲವನ್ನೂ ಮಾಡಿದ್ದಾರೆ. ಮಾನ್ಯ ಸಚಿವರು ಮಾತನಾಡುವಾಗ, ಅಡಿಗಲ್ಲುಗಳನ್ನು ಹಾಕಿದ್ದಾರೆ, ಅಡಿಗಲ್ಲು ಹಾಕಿದಾಕ್ಷಣಕ್ಕೆ ಅದು ಏನೋ ಎನ್ನುವ ಅರ್ಥದಲ್ಲಿ ಹೇಳಿದರು. ನಾನು ತಮಗೆ ಹೇಳುತ್ತೇನೆ. ಅಡಿಗಲ್ಲುಗಳನ್ನು ಹಾಕಿರುವುವು ಎಷ್ಟು? ಇಷ್ಟು ದಿವಸಗಳ ಕಾಲದಲ್ಲಿ ಕುಡಿಯುವ ನೀರಿಗೆ ಎಷ್ಟು ಅಡಿಗಲ್ಲುಗಳನ್ನು ಹಾಕಿದ್ದಾರೆ? ನನಗನಿಸುತ್ತದೆ, ಮಾನ್ಯ ವಿರೇಂದ್ರ ಪಾಟೀಲರ ಕಾಲದಲ್ಲಿ ಅಡಿಗಲ್ಲು ಹಾಕಿರುವುದು ನಿಜ. ಆಗ ನಮ್ಮದೂ ಆಯಿತು, ಮೈಸೂರು ನಗರದಲ್ಲೂ ಅವರೇ ಹಾಕಿದರು ಮತ್ತು ಮಂಡ್ಯಾದಲ್ಲೂ ಅವರೇ ಹಾಕಿದರು. ಇದರ ಬಗ್ಗೆ ಇದುವರೆಗಿನ ಪ್ರಗತಿ ಏನು? ಸ್ವಲ್ಪ ಹೆಚ್ಚು ಕಡಿಮೆ 5-6 ವರ್ಷವಾಯಿತು. ಅಂದರೆ ಕೆಲವು ಪ್ರಗತಿಯಾಗಿದೆ, ಆಗಿಲ್ಲ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ನಮ್ಮಲ್ಲಿ ಸ್ವಲ್ಪ ಹೆಚ್ಚು ಕಡಿಮೆ, 2-3 ಕಿಲೋಮೀಟರ್‌ವರೆಗೆ ಕೊಳವೆಗಳು ಬಂದಿವೆ. ಮೈಸೂರಿನಲ್ಲಿ ಕೆಲವು ಕಡೆ ಕೊಳವೆಗಳು ಬಂದಿವೆ. ಎಲ್ಲಾ ಯೋಜನೆಗಳೂ ಪ್ರಾರಂಭವಾಗಿ ನಿಂತಿವೆ. ಅಂದರೆ, ಅಡಿಗಲ್ಲನ್ನು ಹಾಕಿ, ಸುಮ್ಮನೆ ಬಿಟ್ಟಿಲ್ಲ ಅಂದ ಮೇಲೆ, ಇದನ್ನು ಮುಂದುವರಿಸತಕ್ಕ ಜವಾಬ್ದಾರಿ ಯಾರದು? ಈ ಸರ್ಕಾರದ್ದು. ಆದ್ದರಿಂದ ತಾವು ಯೋಜನೆ ಇನ್ನೂ ಪ್ರಾರಂಭವಾಗಿಲ್ಲ ಎಂದು ಹೇಳುವುದಾದರೆ, ಯಾವ ಯೋಜನೆ ಪ್ರಾರಂಭವಾಗಿಲ್ಲ, ಅಂತಹ ಅಡಿಗಲ್ಲನ್ನು ಬೇಕಾದರೆ ಲಾರಿಯಲ್ಲಿ ಹಾಕಿಕೊಂಡು ಬಂದು, ನಿಮ್ಮ ಸರ್ಕಾರಕ್ಕೆ ಕೊಡುತ್ತೇವೆ. ನೀವು ಮುಂದೆ ಬೇರೆ ಅಡಿಗಲ್ಲು ಹಾಕುವುದಾದರೆ ಹಾಕಿ.

ಶ್ರೀ ವೈಜನಾಥ ಪಾಟೀಲ್ : ಈ ಯೋಜನೆಗೆ ಅಡಿಗಲ್ಲು ಇಟ್ಟಿರುವುದು 4-5 ವರ್ಷಗಳ ಮೊದಲು. ಇದಕ್ಕೆ ಬೇರೆ ಬೇರೆ ಬ್ಯಾಂಕುಗಳ ವತಿಯಿಂದ ಹಣವನ್ನು ತೆಗೆದುಕೊಂಡು, ಈ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಅವರು ಲಾರಿಗಳಲ್ಲಿ ಏನು ಕಲ್ಲು ಕಳುಹಿಸುತ್ತಾರೆಂದು, ನಮಗೆ ಗ್ಯಾರಂಟಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನನ್ನದೇ ಒಂದು ವಾರದಿಂದ ಕಾಡಿ ಬೇಡುತ್ತಿದ್ದೇನೆ. ಕಾವೇರಿ ಯೋಜನೆ ಸಂಪೂರ್ಣವಾಗಿ ಮುಗಿಸುವುದಕ್ಕೆ ಎಷ್ಟು ಕಾಲ ಬೇಕು? ಇದು ರಾಜ್ಯಕ್ಕೆ ಸಂಬಂಧಪಟ್ಟದ್ದು. ಇಡೀ ರಾಜ್ಯದಲ್ಲಿ ಸುಮಾರು 18 ಯೋಜನೆಗಳು ಆಗಿವೆ. ನಾನು ಅವರನ್ನು ಉದ್ವೇಶಪೂರ್ವಕವಾಗಿ, ಪ್ರಾಮಾಣಿಕವಾಗಿ ಇಕ್ಕಟ್ಟಿಗೆ ಸಿಕ್ಕಿಸುವುದಕ್ಕೆ ಮಾತನಾಡುತ್ತಿಲ್ಲ. ನಾನು ಅವರಲ್ಲಿ ಕೈಮುಗಿದು ಕೇಳುತ್ತೇನೆ. ನೀವು, ವೀರೇಂದ್ರ ಪಾಟೀಲರ ಕಾಲದಲ್ಲಿ ಎಂದು ಹೇಳಿದ್ದಕ್ಕೆ ನನಗೆ ಕೋಪ ಬರಲಿಲ್ಲ, ನಾನು ಆ ಭಾವನೆ ಇಟ್ಟುಕೊಂಡಿಲ್ಲ. ಅಂದರೆ ಅವರ ಕಾಲದಲ್ಲಿ ಆಯಿತು ಎಂದು ನೆನೆದುಕೊಳ್ಳಬೇಕು, ಬೇರೆ ಮಾತೇ ಇಲ್ಲ. ವೀರೇಂದ್ರ ಪಾಟೀಲರು ಪ್ರಾಮಾಣಿಕವಾಗಿ ಹೃದಯಬಿಚ್ಚಿ ಒಳ್ಳೆಯ ಕೆಲಸ ಮಾಡಿದ್ದಾರೆ. ಈಗ ಅವರದೇ ಊರಿನವರಾದ ಚಿಂಚೋಳಿಯವರು ದಯಮಾಡಿ, ಈ ಕಾರ್ಯಕ್ರಮವನ್ನು ಮುಗಿಸಿಕೊಡುತ್ತೀರೋ?

ಶ್ರೀ ವೈಜನಾಥ ಪಾಟೀಲ್ : ಆಯಿತು.

ಅಧ್ಯಕ್ಷರು : ಮಾನ್ಯ ಚಂದ್ರಕಾಂತ ಬೆಲ್ಲದ್‌ರವರೇ, ತಾವು ಎರಡನೇ ಬಾರಿ ವಿಧಾನ ಸಭೆಗೆ ಆರಿಸಿ ಬಂದಿದ್ದೀರಿ. ಬೇರೆಯವರ ಪರವಾಗಿ ಪ್ರಶ್ನೆ ಕೇಳಲು, ಮುಂಚಿತವಾಗಿಯೇ ಬರೆದು ಕೊಡಬೇಕು. ಮೊನ್ನೆ ಈಶ್ವರಪ್ಪನವರು ಬಂದಿರಲಿಲ್ಲ,

ಅವರು ಕೇಳುವ ಅಧಿಕಾರವನ್ನು ಬೇರೆಯವರಿಗೆ ಕೊಟ್ಟಿದ್ದರು. ಅದೇ ರೀತಿ ಅಶೋಕ್ ಎಸ್. ಕಾಟವೇ ಅವರು ಬಾರದೇ ಇದ್ದಾಗ, ಪ್ರಶ್ನೆ ಕೇಳುವ ಅಧಿಕಾರವನ್ನು ಬೇರೆಯವರಿಗೆ ವಹಿಸಬೇಕಾಗಿತ್ತು. ಆಮೇಲೆ ಮಾನ್ಯ ಕೃಷ್ಣಪ್ಪನವರ ಪ್ರಶ್ನೆಯನ್ನೂ ಮುಂದಕ್ಕೆ ಹಾಕಲಾಗಿದೆ. ಏಕೆಂದರೆ ಉತ್ತರ ಬಂದಿರುವುದಿಲ್ಲ.

**ಎಂ.ಆರ್.ಪಿ.ಎಲ್. ಸಂಸ್ಥೆ ಬೈಕಂಪಾಡಿಯಿಂದ ಮಂಗಳೂರು ನಗರಾಭಿವೃದ್ಧಿ ಸಂಸ್ಥೆಗೆ ಬಾಕಿಯಿರುವ ಹಣ**

422 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಎಂ.ಆರ್.ಪಿ.ಎಲ್. ಸಂಸ್ಥೆ ಬೈಕಂಪಾಡಿಯಿಂದ ಮಂಗಳೂರು ನಗರಾಭಿವೃದ್ಧಿ ಸಂಸ್ಥೆಗೆ ಬಾಕಿ ಇರುವ ಹಣ ಎಷ್ಟು? ಅದರಲ್ಲಿ ಬೆಟರ್ ಮೆಂಟ್ ಲೆವಿ ಎಷ್ಟು, ವಾಟರ್ ಅಗ್ಮೆಂಟೇಷನ್ ಚಾರ್ಜ್ ಎಷ್ಟು?*

*ಆ) ರಾಜ್ಯ ಸರ್ಕಾರ ಮೇಲಿನ ಸಂಸ್ಥೆಯಿಂದ ಬಾಕಿ ಇರುವ ಹಣವನ್ನು ಕೂಡಲೇ ಸಂಗ್ರಹಿಸಿ ಮಂಗಳೂರಿನ ಸಮಗ್ರ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸಲು, ಒಳಚರಂಡಿ ಯೋಜನೆ ಸುಸ್ಥಿತಿಗೆ ತರಲು ಹಾಗೂ ಮಂಗಳೂರಿನ ಮಾರ್ಗಗಳ ದುರಸ್ತಿಗೆ ಉಪಯೋಗಿಸಿಕೊಳ್ಳಲಾಗುವುದೇ?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಎಂ.ಆರ್.ಪಿ.ಎಲ್. ಸಂಸ್ಥೆಯು ಮಂಗಳೂರು ಪ್ರಾಧಿಕಾರಕ್ಕೆ ಪಾವತಿಸಬೇಕಾದ ಅಂದಾಜು ಮೊತ್ತ ರೂ. 18.16 ಕೋಟಿಗಳು ವಿವರ ಕೆಳಕಂಡಂತೆ ಇದೆ.

ಅ) ಬೆಟರ್ ಮೆಂಟ್ ಶುಲ್ಕ ರೂ. 4.61 ಕೋಟಿಗಳು

ಆ) ಜಲ ಸಂಪನ್ಮೂಲ ಕ್ರೋಡೀಕರಣ ಶುಲ್ಕ ರೂ. 13.55 ಕೋಟಿಗಳು.

ಆ) ಸದರಿ ಕಂಪೆನಿಯು ಮಂಗಳೂರಿನ ಕೊತ್ತನೂರು ಬಾಳ ಮತ್ತು ತೋಕೂರು ಗ್ರಾಮಗಳಲ್ಲಿನ 1335.13 ಎಕರೆ ಜಮೀನನ್ನು ಕೈಗಾರೀಕರಣಕ್ಕಾಗಿ ಅಭಿವೃದ್ಧಿ ಪಡಿಸಲು ಯೋಜಿಸಿದ್ದಾರೆ. ಸರ್ಕಾರ ಈಗಿದ್ದಂತೆ 67.05 ಎಕರೆ ವಿಸ್ತೀರ್ಣವನ್ನು ವ್ಯವಸಾಯ ವಲಯದಿಂದ ಕೈಗಾರಿಕಾ ವಲಯಕ್ಕೆ ಭೂ ಬದಲಾವಣೆ ಅನುಮೋದನೆ ನೀಡಿದೆ. ಕಂಪೆನಿ ಮಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತೆರಬೇಕಾದ ಅಭಿವೃದ್ಧಿ ಶುಲ್ಕವನ್ನು ಮನ್ನಾ ಮಾಡುವಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೇ, ಒಬ್ಬ ಬಡ ನಾಗರೀಕ ಯಾವುದೇ ಬೆಟರ್‌ಮೆಂಟ್ ಲೆವಿ ಕಟ್ಟದೇ ಅಥವಾ ಸಂಬಂಧಪಟ್ಟ ಸರ್ಟಿಫಿಕೇಟ್ ಸಿಕ್ಕದೇ, ಮನೆ ಕಟ್ಟಲು ಲೈಸೆನ್ಸ್ ಸಿಕ್ಕುವುದಿಲ್ಲ, ಅವನು ಮನೆ ಕಟ್ಟುವುದಕ್ಕೆ ಸಾಧ್ಯವಿಲ್ಲ ಇಂತಹ ಪ್ರಸಂಗದಲ್ಲಿ, ಮಂಗಳೂರಿನ ಹತ್ತಿರವಿರುವ ಬೈಕಂಪಾಡಿಯಲ್ಲಿ, ಎಂ.ಆರ್.ಪಿ.ಎಲ್. ಎಂಬ ಸಂಸ್ಥೆಯವರು 4 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ, ಅತ್ಯಂತ ದೊಡ್ಡ ಕಟ್ಟಡವನ್ನು ಕಟ್ಟುವುದಕ್ಕೆ ಯಾವುದೇ ಬೆಟರ್‌ಮೆಂಟ್‌ಲೆವಿಯನ್ನು ಕಟ್ಟದೇ ಹೊರಟಿದ್ದಾರೆ. ಸುಮಾರು 18 ಕೋಟಿ 16 ಲಕ್ಷ ರೂಪಾಯಿಗಳ ಬೆಟರ್ ಮೆಂಟ್‌ಲೆವಿಯನ್ನು ಕಟ್ಟದೇ ಕಟ್ಟಡದ ರಚನೆ ಮಾಡುತ್ತಿದ್ದಾರೆ. ಹಾಗಾದರೆ, ಕಳೆದ ಒಂದು ವರ್ಷದಿಂದ ಸರ್ಕಾರ ಇದರ ಬಗ್ಗೆ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ನಾವು ಇದರ ಬಗ್ಗೆ ಮನ್ನಾ ಮಾಡಬೇಕೆಂದು ಬರೆದಿದ್ದಾರೆಂದು ಹೇಳಿದರೂ ಕೂಡ, ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ, ಇದು ಎಂತಹ ನಾಚಿಕೆಗೇಡಿನ ಸಂಗತಿ. ನನಗೆ ಸರ್ಕಾರದ ಕಡೆಯಿಂದ ಸ್ಪಷ್ಟೀಕರಣ ಕೊಡಬೇಕು. ಈ ಹಣವನ್ನು